# ಪ್ರಮಾಣಿತ ಕಾರ್ಯವಿಧಾನ

**ಕಾರ್ಯವಿಧಾನದ ಸಂ.:** KMT-US-OGC-0004

**ಪರಿಷ್ಕರಣೆ:** 02 **ಪುಟ:** 1 10 ರ

**ವಿಷಯ/ಶೀರ್ಷಿಕೆ:** **KENNAMETAL INC. ಜಾಗತಿಕ ಭ್ರಷ್ಟಾಚಾರ ವಿರೋಧಿ ಮತ್ತು ಲಂಚ ವಿರೋಧಿ ಕಾರ್ಯವಿಧಾನ**

ಪ್ರಕಟಣೆ: ಇಲ್ಲಿ ನೀಡಿರುವ ಮಾಹಿತಿ Kennametal Inc. ಮತ್ತು/ಅಥವಾ Kennametal Inc. ಅಂಗ ಸಂಸ್ಥೆಯ ಆಸ್ತಿಯಾಗಿರುತ್ತದೆ, ಮತ್ತು ಇದು ಒಡೆತನದ ಅಥವಾ ವ್ಯವಹಾರ ರಹಸ್ಯ ಮಾಹಿತಿ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳನ್ನು ಹೊಂದಿರಬಹುದು. ಇದನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ Kennametal ವ್ಯಾಪ್ತಿಯೊಳಗೆ ಆಂತರಿಕವಾಗಿ ಬಳಸ ಬೇಕೆಂಬ ವಿಶ್ವಾಸದಿಂದ ನಿಮಗೆ ಸಲ್ಲಿಸಲಾಗಿದೆ ಮತ್ತು ಕೇವಲ ಆ ಉದ್ದೇಶಕ್ಕಾಗಿ ಮಾತ್ರ ಬಳಸಬಹುದು. ಈ ಕಾರ್ಯವಿಧಾನದ ಮರುಉತ್ಪಾದನೆ, ವಿತರಣೆ ಮತ್ತು ಬಳಕೆಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ, ಹಾಗೆಯೇ ಅದರ ವಿಷಯವನ್ನು ಯಾವುದೇ ಅನಧಿಕೃತ ವ್ಯಕ್ತಿಗಳಿಗೆ ಸಂವಹಿಸುವುದನ್ನು ನಿಷೇಧಿಸಲಾಗಿದೆ. ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಈ ಪುಟವು ಕಾರ್ಯವಿಧಾನದ ಎಲ್ಲ ಪರಿಷ್ಕರಣೆಗಳು ಅಥವಾ ಕಾರ್ಯಸೂಚನೆಗಳ ದಾಖಲೆಯಾಗಿದೆ.

ಅನುಕೂಲಕ್ಕಾಗಿ, ಪರಿಷ್ಕರಣೆಯ ಸ್ವರೂಪವನ್ನು ಹೇಳಿಕೆಗಳ ಅಡಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಎಲ್ಲಾ ಪ್ರಸ್ತುತ ಬದಲಾವಣೆಗಳು, ಸೇರ್ಪಡೆಗಳು, ಅಥವಾ ತೆಗೆದುಹಾಕುವಿಕೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುವುದಾಗಿ ಖಚಿತಪಡಿಸಲು ಲಗತ್ತಿಸಿದ ಕಾರ್ಯವಿಧಾನವನ್ನು ದಯವಿಟ್ಟು ಪರಿಶೀಲಿಸಿ. ಸ್ಪಷ್ಟವಾಗಿ ನಮೂದಿಸದ ಹೊರತು, ಈ ಪರಿಷ್ಕರಣೆಯನ್ನು ಸ್ವೀಕೃತಿಯ ಮೇರೆಗೆ ಅಳವಡಿಸಬೇಕು.

| REV | ಮೂಲಕ | ಪುಟಗಳು | ಟಿಪ್ಪಣಿಗಳು |
|---|---|---|---|
| 00 | DWG | 1-10 | ಮೂಲ ಬಿಡುಗಡೆ. |
| 01 | PJW | 1-11 | ಪರಿಷ್ಕರಣೆ |

| REV | ಹೊರಡಿಸಿದವರು | ದೃಢೀಕರಿಸಿದವರು | ದೃಢೀಕರಣದ ದಿನಾಂಕ |
|---|---|---|---|
| **00** | **ರೊಕ್ಸೆನ್ ಟರ್ನರ್** | **ಡೇವಿಡ್ W. ಗ್ರೀನ್‌ಫೀಲ್ಡ್** | **08/01/2007** |
| **01** | **ಪಾಲ್ J. ವಾರ್ಡ್** | **ಕೆವಿನ್ G. ನೊವೆ** | **11/01/2013** |
| | | | |
| | | | |
| | | | |

ಈ ಕಾರ್ಯವಿಧಾನದ ವಿದ್ಯುನ್ಮಾನ ಆವೃತ್ತಿಯು ಒಂದು ನಿಯಂತ್ರಿತ ದಾಖಲೆಯಾಗಿದೆ.
ಈ ದಾಖಲೆಯಿಂದ ಮುದ್ರಿತವಾದ ಯಾವುದೇ ಪ್ರತಿಗಳು ಕೇವಲ ಉಲ್ಲೇಖಕ್ಕಾಗಿ ಮಾತ್ರ ಆಗಿರುತ್ತದೆ.

**ಜಾಗತಿಕ ಭ್ರಷ್ಟಾಚಾರ ವಿರೋಧಿ ಮತ್ತು ಲಂಚ ವಿರೋಧಿ ಕಾರ್ಯವಿಧಾನ**

## I. ಉದ್ದೇಶ

ಜಾಗತಿಕ ಭ್ರಷ್ಟಾಚಾರ ವಿರೋಧಿ ಹಾಗೂ ಲಂಚ ವಿರೋಧಿ ಕಾರ್ಯವಿಧಾನವು ("ಕಾರ್ಯವಿಧಾನ"), Kennametal Inc. ನ ಎಲ್ಲ ನಿರ್ದೇಶಕರು, ಅಧಿಕಾರಿಗಳು ಮತ್ತು ನೌಕರರು, ಅದರ ಅಂಗಸಂಸ್ಥೆಗಳು ಮತ್ತು ಅಂಗಸಂಸ್ಥೆ ಕಂಪನಿಗಳು ("ಕಂಪನಿ" ಅಥವಾ "Kennametal") ಮತ್ತು ಅದರ ಏಜೆಂಟರು, ಮಾರಾಟ ಪ್ರತಿನಿಧಿಗಳು, ಸಲಹೆಗಾರರು, ವಿತರಕರು, ಗುತ್ತಿಗೆದಾರರು ಮತ್ತು ಜಾಗತಿಕ ಆಧಾರದ ಮೇಲೆ Kennametal ನಲ್ಲಿ ಪ್ರತಿನಿಧಿಸುವ, ಯಾವುದೇ ವಿನಾಯಿತಿಗಳಿಲ್ಲದೆ ("ಮೂರನೇ ವ್ಯಕ್ತಿಗಳು") ಎಲ್ಲ ಇತರ ಮೂರನೇ ವ್ಯಕ್ತಿಗಳಿಗೆ ಮಾರ್ಗದರ್ಶನಗಳು ಮತ್ತು ನಿರೀಕ್ಷೆಗಳನ್ನು ನೆಲೆಗೊಳಿಸುತ್ತದೆ.

## II. ಪೀಠಿಕೆ

### A. ಅನುಸರಣೆಯ ಬದ್ಧತೆ ಮತ್ತು ನೌಕರರ ಜವಾಬ್ದಾರಿ.

ಇದು ಕಂಪನಿಯು ಕಾರ್ಯನಿರ್ವಹಿಸುವ ರಾಷ್ಟ್ರದ ಎಲ್ಲ ಕಾನೂನುಗಳು, ನಿಯಮಗಳು ಮತ್ತು ಕಟ್ಟುಪಾಡುಗಳಿಗೆ ಬದ್ಧವಾಗಿರುವುದು ಕಂಪನಿಯ ಪರಿಪಾಠವಾಗಿದೆ. ಇದು ಕಾನೂನು ಮಾನದಂಡ, ನಿರ್ಬಂಧಗಳು ಮತ್ತು ತಮಗೆ ಅನ್ವಯಿಸುವ ಹಾಗೂ ತಾವೇ ಆ ಪ್ರಕಾರವಾಗಿ ನಿರ್ವಹಿಸುವ ಜವಾಬ್ದಾರಿಗಳೊಂದಿಗೆ ಕರ್ತವ್ಯವನ್ನು ನಿರ್ವಹಿಸಲು ಎಲ್ಲಾ ನಿರ್ದೇಶಕರು, ಅಧಿಕಾರಿಗಳು, ನೌಕರರು ಮತ್ತು ಮೂರನೇ ವ್ಯಕ್ತಿಗಳ ವೈಯಕ್ತಿಕ ಜವಾಬ್ದಾರಿಯಾಗಿದೆ. ವ್ಯವಹಾರ ಪಡೆಯಲು ಅಥವಾ ಅದನ್ನು ಉಳಿಸಿಕೊಳ್ಳಲು, ಅಥವಾ ಅನ್ಯಾಯದ ವ್ಯವಹಾರದ ಅನುಕೂಲ ಪಡೆಯಲು Kennametal ಆಗಲಿ, ಅದರ ಅಧಿಕಾರಿಗಳು, ನಿರ್ದೇಶಕರು ಮತ್ತು ನೌಕರರು ಅಥವಾ ಅದರ ಮೂರನೇ ವ್ಯಕ್ತಿಗಳು ಲಂಚ, ಅನುಚಿತ ಪಾವತಿಗಳು, ಅಥವಾ ಯಾವುದೇ ರೀತಿಯ ಪ್ರೇರಣೆಗಳನ್ನು ಪಡೆದುಕೊಳ್ಳುವಂತಿಲ್ಲ.

ಪ್ರತಿ Kennametal ನಿರ್ದೇಶಕ, ಅಧಿಕಾರಿ ಮತ್ತು ನೌಕರರು ಮತ್ತು ಎಲ್ಲ ಮೂರನೇ ವ್ಯಕ್ತಿಗಳು ಈ ವಿಧಾನವನ್ನು ಓದಬೇಕು ಹಾಗೂ ಅದನ್ನು ಪಾಲಿಸಬೇಕು ಮತ್ತು **ಯಾವುದೇ ಪ್ರಶ್ನಾರ್ಹ ವ್ಯವಹಾರದೊಂದಿಗೆ ಮುಂದುವರಿಯುವ ಮುನ್ನ** ಪ್ರಸ್ತಾಪಿಸಿದ ಕ್ರಮಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳನ್ನು ಅಥವಾ ಕಳವಳಗಳನ್ನು ಬಗೆಹರಿಸಲು ಸಕಾಲಿಕವಾಗಿ ಸಾಮಾನ್ಯ ಸಲಹೆಗಾರರ ಕಚೇರಿಯನ್ನು ಸಂಪರ್ಕಿಸಬೇಕು.

### B. FCPA ಮೇಲೆ ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳು/ಕೇಂದ್ರಿಕರಣ.

ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳು ಯಾವುದೇ ರೂಪದಲ್ಲಿ ಲಂಚ ಪಡೆಯುವುದನ್ನು ಕಾನೂನುಬಾಹಿರ ಮಾಡುತ್ತದೆ. ಕೆಲವು ದೇಶಗಳ ಕಾನೂನುಗಳು ಸರ್ಕಾರಿ ಅಧಿಕಾರಿಗಳ ಲಂಚಗುಳಿತನದ ಮೇಲೆ ಗಮನವನ್ನು ಕೇಂದ್ರೀಕರಿಸುತ್ತವೆ (ಕೆಲವೊಮ್ಮೆ "ವಿದೇಶಿ ಅಧಿಕಾರಿಗಳು" ಅಥವಾ "ಸಾರ್ವಜನಿಕ ಅಧಿಕಾರಿಗಳು" ಎಂದು ಕರೆಯಲಾಗುತ್ತದೆ), ಇದೇ ಸಂದರ್ಭದಲ್ಲಿ ಇತರ ಕಾನೂನುಗಳು ಸರ್ಕಾರಿ ಅಧಿಕಾರಿಗಳ ಲಂಚಗುಳಿತನ ಮತ್ತು ವಾಣಿಜ್ಯ ಲಂಚಗುಳಿತನ ಎರಡನ್ನೂ ನಿಷೇಧಿಸುತ್ತದೆ (ಅಂದರೆ, ಸರ್ಕಾರೇತರ ಸಂಸ್ಥೆಗಳಲ್ಲಿನ "ಖಾಸಗಿ

ಅಧಿಕಾರಿಗಳ" ಲಂಚಗುಳಿತನ). ಕಂಪೆನಿಗಳು ತಮ್ಮ ವಿದೇಶಿ ಮತ್ತು ದೇಶೀ ವ್ಯವಹಾರಗಳನ್ನು ನಿಖರವಾಗಿ ಮತ್ತು ಸೂಕ್ತವಾಗಿ ಪ್ರತಿಬಿಂಬಿಸುವ ಪುಸ್ತಕಗಳು, ದಾಖಲೆಗಳು ಮತ್ತು ಖಾತೆಗಳನ್ನು ವಿವರವಾಗಿ ಇಟ್ಟುಕೊಳ್ಳಲು ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳು ಸಹ ತಿಳಿಸುತ್ತವೆ.

ಅಮೇರಿಕಾ ("U.S.") ಮೂಲದ ಕಂಪನಿಯು ಇಂಗ್ಲೆಂಡ್ ("UK") ನಲ್ಲಿ ವ್ಯವಹಾರ ನಿರ್ವಹಣೆ ಮಾಡುವಾಗ , ಕಂಪೆನಿಯ ಉದ್ಯಮ ನೀತಿಸಂಹಿತೆಯ ಕೋಡ್ ಮತ್ತು 1977 ರ ಅಮೇರಿಕಾದ ವಿದೇಶಿ ಲಂಚಗುಳಿ ಪರಿಪಾಠಗಳ ಕಾಯಿದೆ ("FCPA"), 2010 ("ಯುಕೆ ಬ್ರೈಬರಿ ಆಕ್ಟ್") ನ ಯುಕೆ ಬ್ರೈಬರಿ ಆಕ್ಟ್ ನಿಯಮದಲ್ಲಿ ನಡವಳಿಕೆಯ ನಿಯಮಗಳನ್ನು ಅನುಸರಿಸುವ ನೀತಿ ಬದ್ಧತೆಯನ್ನು ಒಳಗೊಂಡಿದೆ ಮತ್ತು ಸಂಬಂಧಿತ ಶಾಸನ, ಜೊತೆಗೆ ಸ್ಥಳೀಯ ಭ್ರಷ್ಟಾಚಾರ ವಿರೋಧಿ, ಹಣ ಚಲಾವಣೆ ಮತ್ತು ಕಂಪನಿ ಕಾರ್ಯ ನಿರ್ವಹಿಸುವ ಎಲ್ಲ ದೇಶಗಳ ಇತರ ಕಾನೂನುಗಳು (ಒಟ್ಟಾರೆಯಾಗಿ, "ಜಾಗತಿಕ ಭ್ರಷ್ಟಾಚಾರ ವಿರೋಧಿ ನಿಯಮಗಳು") ಒಳಗೊಂಡಿದೆ. ಈ ಕಾರ್ಯವಿಧಾನವು ಪ್ರಾಥಮಿಕವಾಗಿ FCPA ಅವಶ್ಯಕತೆಗಳ ಮೇಲೆ ಬೆಳಕು ಚೆಲ್ಲುತ್ತದೆ ಮತ್ತು Kennametal ಕಾರ್ಯ ನಿರ್ವಹಿಸುವ ಇತರ ದೇಶಗಳ ಭ್ರಷ್ಟಾಚಾರ ವಿರೋಧಿ ಕಾನೂನುಗಳ ಕೇವಲ ಸಾಮಾನ್ಯ ಆಕರಗಳನ್ನು ಒದಗಿಸುತ್ತದೆ ಮತ್ತು ಇದರಲ್ಲಿ ನೌಕರರು, ಅಧಿಕಾರಿಗಳು, ನಿರ್ದೇಶಕರು ಮತ್ತು ಮೂರನೇ ವ್ಯಕ್ತಿಗಳು ಇರುತ್ತಾರೆ ಮತ್ತು ಕೆಲಸ ಮಾಡುತ್ತಾರೆ. ಎಲ್ಲಾ ವ್ಯಕ್ತಿಗಳು ಅವರು ಜೀವಿಸುವ ಮತ್ತು ಕೆಲಸ ಮಾಡುವ ಪ್ರತ್ಯೇಕ ದೇಶಗಳಲ್ಲಿ ಭ್ರಷ್ಟಾಚಾರ ವಿರೋಧಿ ಕಾನೂನುಗಳಲ್ಲಿ ನೀಡಲಾಗಿರುವ ನಿಷೇಧಕ್ಕೆ ಒಳಪಡುತ್ತಾರೆ, ಅಂತಹ ಕಾನೂನುಗಳು FCPA ಮತ್ತು UK ಬ್ರೈಬರಿ ಆಕ್ಟ್ ನಂತೆಯೆ ಎಲ್ಲಾ ನೌಕರರಿಗೆ ಸಾರ್ವತ್ರಿಕವಾಗಿ ಅನ್ವಯವಾಗದೇ ಇರಬಹುದು.

ಲಂಚಗುಳಿತನದ ಅಪಾಯ ಮತ್ತು ಭ್ರಷ್ಟಾಚಾರ ಹೆಚ್ಚಾಗಿರುವ ದೇಶಗಳಲ್ಲಿ ಅನುಸರಣೆಯ ಪ್ರಾಮುಖ್ಯತೆಯೊಂದಿಗೆ ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳನ್ನು ಎತ್ತಿ ತೋರಿಸಲಾಗಿದೆ. (i) ಸರ್ಕಾರ ಮತ್ತು ಖಾಸಗಿ ವಲಯದ ಅಧಿಕಾರಿಗಳು ಹೆಚ್ಚಾಗಿ ವಾಣಿಜ್ಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ, (ii) ಭ್ರಷ್ಟಾಚಾರ ಮತ್ತು ಸಂಬಂಧಿಸಿದ ಸಮಸ್ಯೆಗಳು ಸಾಮಾನ್ಯವಾಗಿರುವ ಮತ್ತು (iii) ಕಾನೂನು ಗುಣಮಟ್ಟ ಮತ್ತು ಜಾರಿಗೊಳಿಸುವಿಕೆಯ ನೀತಿಗಳು ಅಭಿವೃದ್ಧಿಯಾಗುತ್ತಿರುವ, ಆದರೆ ಆಗಾಗ್ಗೆ ಅಸ್ಪಷ್ಟ ಮತ್ತು ಅಸಮಂಜಸವಾಗಿ ಅನ್ವಯಿಸಲಾದ ದೇಶಗಳ ಪಟ್ಟಿಯು ಒಳಗೊಂಡಿರುತ್ತದೆ. ಇಂತಹ ಸನ್ನಿವೇಶಗಳಲ್ಲಿ, ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ವಿಶೇಷ ಕಣ್ಣಿಟ್ಟಿರುವುದು ಮುಖ್ಯವಾಗಿದೆ.

**III. ಪರಿಹಾರದ ಮೇಲಿನ ನಿರ್ಬಂಧಗಳು ಮತ್ತು ವ್ಯವಹಾರದ ಉಪಚಾರಗಳು**

A. ವ್ಯವಹಾರ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಪ್ರಯತ್ನಗಳ ಮೇಲೆ ಸಾಮಾನ್ಯ ಪ್ರತಿಬಂಧಕಾಜ್ಞೆ.

1. ಪಾವತಿಗಳು ಅಥವಾ "ಮೌಲ್ಯವಿರುವ ಯಾವುದಾದರೂ": ಕಾರ್ಯವಿಧಾನದಲ್ಲಿ ಒದಗಿಸಿರುವುದನ್ನು ಹೊರತುಪಡಿಸಿ, **ಯಾವುದೇ ಕೊಡುಗೆಗಳು, ಪಾವತಿಗಳು, ಪಾವತಿಸುವ ಭರವಸೆ ಅಥವಾ ಯಾವುದೇ ಹಣ ಪಾವತಿಸಲು ಅಧಿಕಾರ, ಯಾವುದೇ ಉಡುಗೊರೆಗಳನ್ನು ಮಾಡುವ ಅಥವಾ ಬೆಲೆಬಾಳುವ ಏನನ್ನಾದರೂ ಒದಗಿಸುವ ಮೂಲಕ ಅಥವಾ ಕಂಪನಿಯ ಪರವಾಗಿ** ನೌಕರರಿಗೆ, ಏಜೆಂಟರಿಗೆ, ಪ್ರತಿನಿಧಿಗಳಿಗೆ, ಅಥವಾ ಯಾವುದೇ ಸಂಸ್ಥೆಯ ಅಧಿಕಾರಿಗಳಿಗೆ, ಖಾಸಗಿ ಕಂಪನಿ, ಸರ್ಕಾರಿ ಒಡೆತನದ (ಅಥವಾ ಭಾಗಶಃ ಒಡೆತನ) ಕಂಪನಿ, ರಾಜಕೀಯ ಪಕ್ಷ ಅಥವಾ ಯಾವುದೇ ಇತರ ಘಟಕದ, ಸಂಸ್ಥೆ ಅಥವಾ ವ್ಯಕ್ತಿ. ವ್ಯಾಪಾರದ ತೀರ್ಮಾನದ ಮೇಲೆ ಪ್ರಭಾವ ಬೀರಲು

ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳ ಪ್ರತಿನಿಧಿಗಳಿಗೆ ಯಾವುದೇ ಮೌಲ್ಯಯುತವಾವಾದದ್ದನ್ನು ಒದಗಿಸುವುದನ್ನು ಈ ಕಾರ್ಯವಿಧಾನವು ವ್ಯಾಪಕವಾಗಿ ನಿಷೇಧಿಸಿರುವ ಸಂದರ್ಭದಲ್ಲಿ FCPA ಮತ್ತು ಹಲವಾರು ಇತರ ರಾಷ್ಟ್ರಗಳ ಕಾನೂನುಗಳು ಸರ್ಕಾರಿ ಅಧಿಕಾರಿಗಳಿಗೆ ಯಾವುದೇ ಮೌಲ್ಯಯುತವಾದದ್ದನ್ನು ಒದಗಿಸುವ ಪ್ರಯತ್ನವನ್ನು ಅಥವಾ ಹೆಚ್ಚು ನಿಕಟವಾದ ಪಾವತಿಗಳನ್ನು ತನಿಖೆ ಮಾಡುತ್ತವೆ.

ಖಾಸಗಿ ಕಂಪನಿಗಳು ಮತ್ತು ಸರ್ಕಾರಿ ಸಂಸ್ಥೆಗಳ ಅಧಿಕಾರಿಗಳ ಜೊತೆ ವ್ಯವಹರಿಸುವಾಗ ಈ ವರ್ತನೆಗಳನ್ನು ನಿಷೇಧಿಸಲಾಗಿದೆ:

(i) ಅಂತಹ ವ್ಯಕ್ತಿಯ ಅಥವಾ ಪಕ್ಷದ ಅಧಿಕಾರಯುಕ್ತ ಸಾಮರ್ಥ್ಯದ ಮೇಲೆ ಅಂತಹ ವ್ಯಕ್ತಿಯ ಯಾವುದೇ ವರ್ತನೆ ಅಥವಾ ನಿರ್ಧಾರದ ಮೇಲೆ ಪ್ರಭಾವ ಬೀರುವುದು;

(ii) ಅಂತಹ ವ್ಯಕ್ತಿಯ ಅಥವಾ ಜನರ ಕಾನೂನುಬದ್ಧ ಕರ್ತವ್ಯವನ್ನು ಉಲ್ಲಂಘಿಸುವಂತಹ ಕ್ರಮವನ್ನು ಮಾಡುವಂತೆ ಅಂತಹ ವ್ಯಕ್ತಿ ಅಥವಾ ಜನರನ್ನು ಪ್ರೇರೇಪಿಸುವುದು; ಅಥವಾ

(iii) ವಿದೇಶಿ ಸರ್ಕಾರ ಅಥವಾ ಸಂಸ್ಥೆಯೊಂದಿಗೆ ಅಂತಹ ಸರ್ಕಾರ ಅಥವಾ ಸಂಸ್ಥೆಯ ಯಾವುದೇ ಕ್ರಮ ಅಥವಾ ತೀರ್ಮಾನಕ್ಕೆ ಪರಿಣಾಮಕಾರಿಯಾಗಿರುವ ಅಥವಾ ಪ್ರೇರಣೆ ನೀಡುವಂತೆ ಶಿಫಾರಸನ್ನು ಬಳಸುವುದು.

"ಸರಕಾರಿ ಅಧಿಕಾರಿ" ಅಧಿಕಾರಿ ಅಥವಾ ವಿದೇಶಿ ಸರಕಾರದ ಉದ್ಯೋಗಿ (U.S. ನ ಹೊರಗಿನ ಸರಕಾರ) ಅಥವಾ ಯಾವುದೇ ಇಲಾಖೆ ಅಥವಾ ಅದರ ಏಜೆನ್ಸಿ, ಅಥವಾ ಸಾರ್ವಜನಿಕ ಅಂತರರಾಷ್ಟ್ರೀಯ ಸಂಸ್ಥೆಯ, ಅಥವಾ ಯಾವುದೇ ವ್ಯಕ್ತಿಯು ಅಧಿಕೃತ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಅಥವಾ ಅವರ ಪರವಾಗಿ. ಉದಾಹರಣೆಗೆ, ರಾಜ್ಯ ಸ್ವಾಮ್ಯದ ಅಥವಾ ಸಾರ್ವಜನಿಕ ವಲಯದ ಉದ್ಯಮಗಳ ನೌಕರನ ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳ ಉದ್ದೇಶಗಳಿಗಾಗಿ "ಸರ್ಕಾರದ ಅಧಿಕಾರಿ" ಆಗಿರಬಹುದು.

2. ಉಲ್ಲಂಘನೆಗೆ ಅಗತ್ಯವಿರುವ ಜ್ಞಾನದ ಮಟ್ಟ: ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳ ಉಲ್ಲಂಘನೆಗೆ ವಾಸ್ತವಿಕ ಜ್ಞಾನ ಉಲ್ಲಂಘನೆಯು ಅಗತ್ಯವಿರುವುದಿಲ್ಲ. ವ್ಯಕ್ತಿಗೆ ತಿಳಿದಿದ್ದರೆ ಅಥವಾ ಕಾನೂನು ಬಾಹಿರ ಕೃತ್ಯ ಸಂಭವಿಸುವ ಸಾಧ್ಯತೆಗಳ ಕಾರಣ ತಿಳಿದಿದ್ದರೆ, ಜಾಗತಿಕ ಭ್ರಷ್ಟಾಚಾರ ವಿರೋಧಿ ಕಾನೂನುಗಳು ಒಂದು ಅಥವಾ ಹೆಚ್ಚಿನ ಉಲ್ಲಂಘನೆಗಳಾಗಬಹುದು. ಜ್ಞಾನದ ಉದ್ದೇಶಪೂರ್ವಕ ನಿರ್ಲಕ್ಷ್ಯ, ಉದ್ದೇಶಪೂರ್ವಕವಾದ ಅಂಧತ್ವ ಅಥವಾ ಅಂತಹ ಜ್ಞಾನದ ಕುರಿತು ಅಸಡ್ಡೆಯು ಕಂಪನಿ ಮತ್ತು ವ್ಯಕ್ತಿಯನ್ನು ಕಾನೂನುಬಾಹಿರ ವಹಿವಾಟಿನ ಕುರಿತು ಜ್ಞಾನವನ್ನು ಹೊಂದಿರುವಂತೆ ನಂಬುವಲ್ಲಿ ಕಾರಣವಾಗಬಹುದು.

B. ಸುಲಭಗೊಳಿಸುವ ಪಾವತಿಗಳು.

"ಪಾವತಿ ಸುಲಭಗೊಳಿಸುವಿಕೆ" **("ಗ್ರೀಸ್ ಪಾವತಿ" ಎಂದೂ ಸಹ ಕರೆಯಲಾಗುತ್ತದೆ)** ಎಂಬುದು ಸರ್ಕಾರಿ ಅಧಿಕಾರಿಗಳಿಗೆ ಮತ್ತು ಗುಮಾಸ್ತರಿಗಾಗಿ ಇರುವ ಚಿಕ್ಕ ಪಾವತಿಯಾಗಿದ್ದು, ಪ್ರಾಥಮಿಕವಾಗಿ ಇದನ್ನು ಶೀಘ್ರವಾಗಿ ಕೆಲಸ ಮುಗಿಸಲು ಅಥವಾ ದಿನಚರಿಯ ಕಾರ್ಯಕ್ಷಮತೆಯನ್ನು ತಲುಪಲು, ಸರ್ಕಾರದ ವಿವೇಚನೆಗೆ ಒಳಪಡದ ಕಾರ್ಯವಾಗಿದೆ. ಕೆಲವು ಭ್ರಷ್ಟಾಚಾರ ನಿಗ್ರಹ ಕಾನೂನಿನಡಿಯಲ್ಲಿ ಪಾವತಿ

ಸುಲಭಗೊಳಿಸುವಿಕೆಯು ಕಾನೂನುಬಾಹಿರವಾಗಿವೆ, ಮತ್ತು **ಹೀಗಾಗಿ ಈ ಡಾಕ್ಯುಮೆಂಟ್‌ನಲ್ಲಿ ಪಟ್ಟಿಮಾಡಲಾದ ಸೀಮಿತ ಪರಿಸ್ಥಿತಿಗಳನ್ನು ಹೊರತುಪಡಿಸಿ Kennametal ಎಲ್ಲಾ ಪಾವತಿ ಸುಲಭ ಗೊಳಿಸುವಿಕೆಯನ್ನು ನಿಷೇಧಿಸುತ್ತದೆ.** ಪಾವತಿ ಸುಲಭಗೊಳಿಸುವಿಕೆಯ ಸಂದರ್ಭದಲ್ಲಿನ ಕೆಲವು ಉದಾಹರಣೆಗಳು ಕಾರ್ಯವನ್ನು ಜಾಗೃತಗೊಳಿಸುವ ದೃಷ್ಟಿಯಿಂದ ಸಾಮಾನ್ಯವಾಗಿದೆ, ಇನ್ನೂ ನಿಷೇಧಿಸಿರುವುದು ಇವುಗಳನ್ನು ಒಳಗೊಂಡಿರುತ್ತದೆ: (i) ಪರವಾನಿಗೆಗಳನ್ನು ಪಡೆಯುವುದು ಅಥವಾ ಪ್ರಯಾಣದ ವೀಸಾಗಳು; (ii) ವಿದ್ಯುತ್ ಅಥವಾ ದೂರವಾಣಿ ಸೇವೆಯ ಸಂಪರ್ಕಪಡಿಸುವಿಕೆ; ಮತ್ತು (iii) ಆರಕ್ಷಕರ ರಕ್ಷಣೆಯನ್ನು ಪಡೆಯುವಿಕೆ.

ಉದ್ಯೋಗಿ ಅಥವಾ ಇತರ ಕಂಪನಿ ಪ್ರತಿನಿಧಿ ಅಥವಾ ಅವರ ಕುಟುಂಬ ಸದಸ್ಯರಿಗೆ ಆರೋಗ್ಯ, ಸುರಕ್ಷತೆ ಅಥವಾ ಭದ್ರತೆಗೆ ತಕ್ಷಣದ ಬೆದರಿಕೆ ಕಂಡುಬಂದಲ್ಲಿ, ವೈಯಕ್ತಿಕ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮಾತ್ರ ಸುಲಭಗೊಳಿಸುವಿಕೆಯ ಪಾವತಿಗಳ ಪ್ರತಿಬಂಧಕ್ಕೆ **ವಿನಾಯಿತಿ** ಇದೆ. ಇಂತಹ ಸನ್ನಿವೇಶದಲ್ಲಿ, ನೌಕರರ ಮೇಲ್ವಿಚಾರಕರಿಗೆ ಅಥವಾ ಕಂಪನಿ ಪ್ರತಿನಿಧಿಗಳ ಮೇಲ್ವಿಚಾರಕರಿಗೆ ಮತ್ತು ಸಾಮಾನ್ಯ ಸಲಹೆಯ ಕಚೇರಿಗೆ ಪಾವತಿ ಮತ್ತು ಪಾವತಿ ಮಾಡಬೇಕಿರುವ ಕಾರಣವನ್ನು ಸಾಧ್ಯವಾದಷ್ಟು ಬೇಗನೆ ವರದಿ ಮಾಡಬೇಕು. FCPA ಲೆಕ್ಕಪತ್ರ ನಿಬಂಧನೆಗಳ ಅಡಿಯಲ್ಲಿ, ಕಂಪನಿಯ ಪುಸ್ತಕಗಳಲ್ಲಿ ಮತ್ತು ದಾಖಲೆಗಳಲ್ಲಿ ಕಾನೂನಿನೊಂದಿಗೆ ಅನುಸರಣೆಯನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಪಾವತಿ ಸುಲಭಗೊಳಿಸುವಿಕೆಯನ್ನು ಸರಿಯಾಗಿ ಮಾಡಬೇಕು.

C. ಉಡುಗೊರೆಗಳು ಮತ್ತು ಅತಿಥಿ ಸತ್ಕಾರ.

ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ನೌಕರರಿಗೆ ಹೋಟೆಲ್ ಪಾವತಿ, ಸಾರಿಗೆ, ಊಟ ಮತ್ತು ಮನರಂಜನೆ ವೆಚ್ಚಗಳ (“ಅತಿಥಿ ಸತ್ಕಾರ”) ಗಳಂತಹ ಉಡುಗೊರೆ ಮತ್ತು ಅತಿಥಿ ಸತ್ಕಾರವನ್ನು ಒದಗಿಸುವುದನ್ನು Kennametal ಪ್ರೋತ್ಸಾಹಿಸುವುದಿಲ್ಲ. ಆದಾಗ್ಯೂ, ಕೆಲವು ಪರಿಮಿತಿಯ ಪರಿಸ್ಥಿತಿಗಳಲ್ಲಿ, ಕೆಲವು ಅತಿಥಿ ಸತ್ಕಾರ ಮತ್ತು ಸಾಮಾನ್ಯ ಉಡುಗೊರೆಗಳನ್ನು ಲಭ್ಯವಾಗುವಂತೆ ಮಾಡಬಹುದು. ಅಂತಹ ಎಲ್ಲಾ ಅತಿಥಿ ಸತ್ಕಾರ ಮತ್ತು ಕನಿಷ್ಟ ಉಡುಗೊರೆಗಳಂತವು ಹೀಗಿರಬೇಕು:

- ಕಂಪನಿಯ ವ್ಯಾಪಾರಕ್ಕೆ ನೇರವಾಗಿ ಸಂಬಂಧಿಸಿರಬೇಕು;
- ನೀಡಿದ ಹಣದಲ್ಲಿ ಸಮಂಜಸತೆ ಮತ್ತು ಉತ್ತಮ ನಂಬಿಕೆಯಿಂದ ನೀಡಲಾಗಿರುವುದು;
- ಕಂಪನಿ ಉತ್ಪನ್ನಗಳು ಅಥವಾ ಸೇವೆಗಳ ಪ್ರಚಾರ, ಪ್ರಾತ್ಯಕ್ಷಿಕೆ ಅಥವಾ ವಿವರಣೆ ನೀಡುವುದಕ್ಕಾಗಿ ಅಥವಾ ವಿದೇಶಿ ಸರ್ಕಾರ ಅಥವಾ ಏಜೆನ್ಸಿಯಂತಹದೊಂದಿಗೆ ಗುತ್ತಿಗೆಯನ್ನು ಪೂರೈಸುವಿಕೆ ಅಥವಾ ಕಾರ್ಯಕ್ಷಮತೆಯ ಉದ್ದೇಶಕ್ಕಾಗಿ ಮಾತ್ರ ನೀಡಲಾಗಿರುವುದು;
- ಅನ್ವಯವಾಗುವ ದೇಶದ ಸ್ಥಳೀಯ ಕಾನೂನಿನ ಅಡಿಯಲ್ಲಿ ಅನುಮತಿಸಲಾಗಿರುವ; ಮತ್ತು

- ವಿರಳವಾಗಿ ಮತ್ತು ಜಾಗ್ರತೆಯಿಂದ ಆಗಾಗ್ಗೆ ಅತಿಥಿ ಸತ್ಕಾರ ಸಂಚಿತ ಪರಿಣಾಮವನ್ನು ವೀಕ್ಷಿಸಲಾಗುವ ಮತ್ತು ಸಾಮಾನ್ಯ ಉಡುಗೊರೆಗಳು ಅನುಚಿತ ವರ್ತನೆ ಗೋಚರಿಸುವಂತೆ ತೋರಬಹುದು.

ಅತಿಥಿ ಸತ್ಕಾರ ಮತ್ತು ಸಾಮಾನ್ಯ ಉಡುಗೊರೆಯು ಕೆಳಗಿನ ಹೆಚ್ಚುವರಿ ಮಾರ್ಗಸೂಚಿಗಳೊಂದಿಗೆ ಅನುಸರಿಸಬೇಕು:

- ಅಧಿಕಾರಿಗಳು ಅಥವಾ ನೌಕರರ ಭೇಟಿ ಸಂದರ್ಭದಲ್ಲಿ ಅಥವಾ ಇಂತಹ ಚಟುವಟಿಕೆಯ ವೇಳೆಯಲ್ಲಿ, ಪ್ರವಾಸ ಕ್ರಮವನ್ನು ಮತ್ತು ಆಮಂತ್ರಣಗಳನ್ನು ಬರೆದು ತಯಾರಿಸಬೇಕು ಮತ್ತು ಅದನ್ನು ಸರ್ಕಾರಿ ಅಧಿಕಾರಿಗೆ ಕಳುಹಿಸಿ ಸಮಾಲೋಚಿಸಿ ಅವರು ಅದನ್ನು ಶಕ್ತಗೊಳಿಸಿ ಹಾಗೂ ಅವರ ಮೇಲ್ವಿಚಾರಕರಿಂದ ಅನುಮೋದನೆಯನ್ನು ಪಡೆದುಕೊಳ್ಳಬೇಕು ಮತ್ತು ಅವರಿಗೆ ನಿರಾಕರಿಸುವ ಅವಕಾಶವನ್ನು ನೀಡಬೇಕು;

- ಉಪಹಾರಗಳು, ಊಟ ಮತ್ತು ಸ್ಮರಣಿಕೆ ವಸ್ತುಗಳು ಸಮಂಜಸವಾದ ಮೌಲ್ಯದಲ್ಲಿರಬೇಕು ಮತ್ತು ಇಲ್ಲವಾದರೆ ಈ ಕಾರ್ಯವಿಧಾನದ ನಿಯಮಗಳೊಂದಿಗೆ ಸಮಂಜಸವಾಗಿರಬೇಕು;

- ಕೆಲಸದ ವೇಳೆಯಲ್ಲಿ ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟ ಸಮಂಜಸವಾದ ಮೌಲ್ಯದಲ್ಲಿರಬೇಕು ಮತ್ತು ಊಟ ಹಾಗೂ ಮನರಂಜನೆಗಳೆರಡು ಒಳ್ಳೆಯ ಉದ್ದೇಶಗಳಿಗಾಗಿ ಇರುವುದು ಅದು ಸಮಂಜಸಕಾರಕವಾಗಿರಬೇಕು, ಇದು ಸ್ಥಳೀಯ ವ್ಯಾಪಾರ ಅಭ್ಯಾಸಗಳು ಹಾಗೂ Kennametal ವೆಚ್ಚದ ವರದಿ/ ಮರುಪಾವತಿ ಅನುಸರಣೆಯೊಂದಿಗೆ ಸೂಕ್ತವಾಗಿ ಅನುಸರಣೆ ದಾಖಲಾಗಿರಬೇಕು; ಮತ್ತು

- ಪ್ರಚಾರಕ್ಕಾಗಿ ಹಂಚಲಾದ ಅಥವಾ ಸ್ಮರಣಾರ್ಥಕ ಉದ್ದೇಶಗಳಿಗಾಗಿ ಹಂಚಲಾದ ಕಂಪನಿಯ ಲೋಗೊ ಹೊಂದಿರುವ ಉಡುಗೊರೆಗಳು ಅಥವಾ ಇತರೆ ವಸ್ತುಗಳು ಕಡಿಮೆ ವಿತ್ತೀಯ ಮೌಲ್ಯವನ್ನು ಹೊಂದಿರಬೇಕು.

**ಯಾವುದೇ ಪರಿಸ್ಥಿತಿಗಳಡಿಯಲ್ಲಿ ಯಾವುದೇ ರೀತಿಯ ನಗದು ಉಡುಗೊರೆ ಅಥವಾ ಪಾವತಿಗಳನ್ನು ಅನುಮತಿಸುವುದಿಲ್ಲ.**

ಕೊನೆಯದಾಗಿ, ಕಂಪನಿಯ ಆಂತರಿಕ ಸೂಕ್ತ ಒಪ್ಪಿಗೆಗಳಂತಹ ವೆಚ್ಚಗಳಿಗೆ ಒಳಗಾಗುವ ಮುನ್ನ ಭದ್ರಪಡಿಸಿಕೊಳ್ಳಬೇಕು ಮತ್ತು ಆಂತರಿಕ ವರದಿ ಮತ್ತು ದಾಖಲೆಗಳನ್ನು ಸಂಗ್ರಹಿಸುವ ಪ್ರಕ್ರಿಯೆಯನ್ನು ಅನುಸರಿಸಬೇಕು. **ಈ ಕಾನೂನುಗಳಡಿಯಲ್ಲಿ ವಿನಾಯಿತಿಯನ್ನು ಹೊಂದುವ ಯಾವುದೇ ಕನಿಷ್ಠ ಮೌಲ್ಯ ಇಲ್ಲ ಎಂಬುದು ಗಮನಿಸಬೇಕಾದ ಅಂಶವಾಗಿದೆ, ಇದರ ಅರ್ಥ ಕಡಿಮೆ ವಿತ್ತೀಯ ಮೌಲ್ಯವೂ ಸಹ ಜಾಗತಿಕ ಭ್ರಷ್ಟಾಚಾರ ನಿಗ್ರಹ ಕಾನೂನುಗಳನ್ನು ಉಲ್ಲಂಘಿಸಿದಂತಾಗುತ್ತದೆ.**

## IV. ಲೆಕ್ಕಪತ್ರ ನಿರ್ವಹಣೆ ನಿಬಂಧನೆಗಳು

ಎಲ್ಲಾ Kennametal ಬ್ಯಾಂಕ್ ಖಾತೆಗಳು ಮತ್ತು ವಿದೇಶಿ ಮತ್ತು ದೇಶಿಯ ಹಣಕಾಸು ವರ್ಗಾವಣೆಗಳೆರಡಕ್ಕೂ ಯುಕ್ತವಾದ ರೀತಿಯಲ್ಲಿ ಪ್ರತಿಬಿಂಬಿಸುವಂತೆ ಮತ್ತು ದಾಖಲೆಗಳನ್ನು ನಿಖರವಾಗಿ ಸಮಂಜಸ ವಿವರಗಳೊಂದಿಗೆ ಇರಿಸಬೇಕು. ಯಾವುದೇ ಬಹಿರಂಗಪಡಿಸದ

ಅಥವಾ ದಾಖಲಿಸದ ಅಥವಾ ಖಾತೆಯನ್ನು ಯಾವುದೇ ಉದ್ದೇಶಕ್ಕಾಗಿ ಸ್ಥಾಪಿಸಲಾಗುವುದಿಲ್ಲ. ದಾಖಲೆಗಳನ್ನು ಇಡುವ ಸಮಸ್ಯೆಗಳ ಉದಾಹರಣೆಗಳು ಜಾಗತಿಕ ಭ್ರಷ್ಟಾಚಾರ ನಿಗ್ರಹ ಕಾನೂನನ್ನು ಒಳಗೊಂಡಿರುವ ಉಲ್ಲಂಘನೆಗೆ ಕಾರಣವಾಗಬಹುದು:

- ಅಸಮರ್ಪಕ ವ್ಯವಹಾರಗಳನ್ನು ದಾಖಲಿಸುವುದನ್ನು ವಿಫಲವಾಗಿರುವ ದಾಖಲೆಗಳು (ಉದಾ, ಪುಸ್ತಕ ವ್ಯವಹಾರ); ಮತ್ತು
- ಅಸಮರ್ಪಕ ವ್ಯವಹಾರಗಳ ಕೆಲವು ಅಂಶಗಳನ್ನು ಮರೆಮಾಚಲು ತಿದ್ದುಪಡಿ ಮಾಡಲಾದ ದಾಖಲೆಗಳು.

ಈ ರೀತಿಯಲ್ಲಿ ಸಮಂಜಸವಾದ ಭರವಸೆಗಳನ್ನು ನೀಡುವಂತಹ ಲೆಕ್ಕಪತ್ರ ನಿರ್ವಹಣೆ ನಿಯಂತ್ರಣಗಳ ವ್ಯವಸ್ಥೆಯನ್ನು ನಿರ್ವಹಿಸಬೇಕಿದೆ:

- ಆಡಳಿತ ಮಂಡಳಿಯ ದೃಢೀಕರಣದೊಂದಿಗೆ ಅಗತ್ಯಾನುಸಾರವಾಗಿ ವ್ಯವಹಾರವನ್ನು ಕಾರ್ಯಗತಗೊಳಿಸಿರುವುದು;
- ನಿಖರವಾದ ಹಣಕಾಸು ಹೇಳಿಕೆಗಳನ್ನು ಅನುಮತಿಸುವ ಸಲುವಾಗಿ ವಹಿವಾಟುಗಳನ್ನು ದಾಖಲಿಸುವುದು ಮತ್ತು ಸ್ವತ್ತುಗಳಿಗೆ ಹೊಣೆಗಾರಿಕೆಯನ್ನು ನಿರ್ವಹಿಸುವುದು;
- ಆಡಳಿತ ಮಂಡಳಿಯ ದೃಢೀಕರಣದೊಂದಿಗೆ ಮಾತ್ರ ಅಗತ್ಯಾನುಸಾರವಾಗಿ ಸ್ವತ್ತುಗಳಿಗೆ ಪ್ರವೇಶವನ್ನು ಅನುಮತಿಸಲಾಗಿದೆ; ಮತ್ತು
- ಸೂಕ್ತವಾದ ಲೆಕ್ಕ ಪರಿಶೋಧನೆ ಕಾರ್ಯಗಳನ್ನು ನಡೆಸಲಾಗುತ್ತದೆ.

**V. ಮೂರನೇ ವ್ಯಕ್ತಿಗಳೊಂದಿಗೆ ವ್ಯವಹಾರಗಳು**

ಕೆಲವು ಸಂದರ್ಭಗಳಲ್ಲಿ, ಕಂಪನಿ ಅಥವಾ ಅದರ ಉತ್ಪನ್ನಗಳು ಅಥವಾ ಸೇವೆಗಳ ಪರವಾಗಿ ಅಥವಾ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವಾಗ ತೀರ್ಮಾನಕ್ಕಾಗಿ ಸೂಕ್ತವಲ್ಲದ ರೀತಿಯಲ್ಲಿ ಶಿಫಾರಸು ಮಾಡುವುದಕ್ಕಾಗಿ ಮೌಲ್ಯಯುತವಾದ ಏನನ್ನಾದರೂ ಒದಗಿಸುವ ಮೂರನೇ ವ್ಯಕ್ತಿಗಳ ವರ್ತನೆಗಳಿಗೆ Kennametal ಮತ್ತು ಇದರ ನಿರ್ದೇಶಕರು, ಅಧಿಕಾರಿಗಳು ಹಾಗೂ ಉದ್ಯೋಗಿಗಳನ್ನು ಹೊಣೆಗಾರಿಕೆಯನ್ನಾಗಿ ಮಾಡಬಹುದು.

ಆ ಕಾರಣಕ್ಕಾಗಿ, ಅಂತಹ ಮೂರನೇ ವ್ಯಕ್ತಿಗಳೊಂದಿಗೆ ವ್ಯವಹಾರಕ್ಕೆ ತೊಡಗುವ ಮೊದಲು ಮತ್ತು ಸಂಬಂಧದ ಸಂದರ್ಭದಲ್ಲಿ ಕಾರ್ಯತತ್ಪರತೆಯನ್ನು ನಡೆಸುವುದು ಮುಖ್ಯವಾಗಿದೆ. ಮೂರನೇ ವ್ಯಕ್ತಿಯು ಯಾವುದಾದರೂ ಅಸಮರ್ಪಕವಾದ ಮೌಲ್ಯವನ್ನು ಒದಗಿಸಿರಬಹುದು ಅಥವಾ ಕಂಪನಿ ಪರವಾಗಿ ಅಸಮಂಜಸವಾದ ವರ್ತನೆ, ಇಂತವುಗಳನ್ನು Kennametal ನಿರ್ಲಕ್ಷಿಸಬಾರದು ಅಥವಾ ಅಂತಹ ಸತ್ಯತೆಗಳ ಸಾಧ್ಯತೆಗಳ ಸೂಚನೆಯನ್ನು ಕಡೆಗಣಿಸಬಾರದು. ಅಪಾಯ ಕನಿಷ್ಟಗೊಳಿಸುವ ಸಲುವಾಗಿ, ಯಾವುದೇ ಮೂರನೇ ವ್ಯಕ್ತಿ ಸಂಬಂಧವನ್ನು ಹೊಂದುವ ಮೊದಲು ಕಠಿಣ ಮೌಲ್ಯಮಾಪನ ಪರಿಮಾಣಗಳನ್ನು ಪರಿಗಣಿಸಬೇಕು.

ಎಲ್ಲಾ ಮೂರನೇ ವ್ಯಕ್ತಿಗಳು ಈ ಕೆಳಗೆ ತಿಳಿಸಲಾದ ಪ್ರಮಾಣಗಳನ್ನು ಪೂರೈಸಬೇಕು ಎಂಬುದು Kennametal ನ ಕಾರ್ಯತತ್ಪರತೆಗೆ ಅಗತ್ಯವಿರುತ್ತದೆ ಮತ್ತು ಮೂರನೇ ವ್ಯಕ್ತಿಯನ್ನು ಆಯ್ಕೆಮಾಡುವ ಕಂಪನಿಯ ಅಧಿಕಾರಿಯು ಪ್ರಕ್ರಿಯೆಯೊಂದಿಗೆ ಅನುಸರಣೆಯನ್ನು ತೋರಿಸುವುದಕ್ಕಾಗಿ ಸಾಕಷ್ಟು ದಾಖಲಾತಿಗಳನ್ನು ಹೊಂದಿರಬೇಕು:

(i) ಪ್ರಖ್ಯಾತ - ಅವಶ್ಯವಿರುವ ಅನುಭವ ಮತ್ತು ಪರಿಣತಿ;

(ii) ವಿಶ್ವಾಸಾರ್ಹತೆ - ವ್ಯಾಪಾರ ಉಲ್ಲೇಖಗಳನ್ನು ಪಡೆಯಿರಿ;

(iii) ಆರ್ಥಿಕವಾಗಿ ಸ್ಥಿರತೆ - ಬದ್ಧತೆಗಳನ್ನು ಪೂರೈಸಲು ಸಮರ್ಪಕ ಸಂಪನ್ಮೂಲಗಳು;

(iv) ಕಾನೂನಿನೊಂದಿಗೆ ಬದ್ಧವಾಗಿರುವುದು - ಮೂರನೇ ವ್ಯಕ್ತಿಗಳು ಎಲ್ಲಾ ಅನ್ವಯವಾಗುವ ಕಾನೂನುಗಳೊಂದಿಗೆ ಅನುಸರಣೆ ಹೊಂದಲು ಮತ್ತು ಅಸಮರ್ಪಕ ಪಾವತಿಗಳನ್ನು ಮಾಡದಿರಲು ಸಮ್ಮತಿಸುತ್ತಾರೆ; ಮತ್ತು

(v) ಸ್ವೀಕೃತಿ - ಈ ಕಾರ್ಯವಿಧಾನದೊಂದಿಗೆ ಅನುಸರಣೆ ಹೊಂದಲು ಒಪ್ಪಂದದ ಸ್ವೀಕೃತಿಯನ್ನು ನೀಡಿ.

ಕೆಲಸ ಪೂರೈಸಿದ ಮೊತ್ತದೊಂದಿಗೆ ಮೂರನೇ ವ್ಯಕ್ತಿಯ ಯಾವುದೇ ಪಾವತಿಯು ಸ್ಥಿರವಾಗಿರಬೇಕು ಹಾಗೂ ಅದು ಮೂರನೇ ವ್ಯಕ್ತಿ ಪ್ರದರ್ಶನವನ್ನು ಅಸಮಂಜಸವಾಗಿರದ ಮಟ್ಟವನ್ನು ಒಳಗೊಂಡಿರಬಾರದು ಅಥವಾ ಅಸಮಂಜಸ ಕ್ರಿಯೆ ಉಂಟಾಗಿದೆ ಎಂಬ ಗ್ರಹಿಕೆಯನ್ನು ಸೃಷ್ಟಿಸಬಹುದು. ಮೂರನೇ ವ್ಯಕ್ತಿಗಳಿಗೆ ಮೌಲ್ಯದ ಯಾವುದೇ ಪಾವತಿಗಳನ್ನು ನೀಡುವ ಮೊದಲು ಮೇಲಿನ ಮಾರ್ಗಸೂಚಿಗಳಿಗೆ ಅನುಗುಣವಾಗಿ ಜಾಗರೂಕತೆಯಿಂದ ಪರಾಮರ್ಶಿಸಬೇಕು ಮತ್ತು ಪರಾಮರ್ಶೆಯು ಯಾವುದಾದರೂ ಅನುಕೂಲಕರವಲ್ಲದ ಮಾಹಿತಿ ಅಥವಾ "ಕೆಂಪು ಧ್ವಜಗಳು" ಅನ್ನು ಹೊರಹಾಕಿದರೆ ಅದನ್ನು Kennametal ಕಚೇರಿಯ ಸಾಮಾನ್ಯ ಸಲಹೆಯ ಗಮನಕ್ಕೆ ತರಬೇಕು ಅಥವಾ ಉಲ್ಲೇಖಿಸಬೇಕು.

ಹೆಚ್ಚುವರಿಯಾಗಿ, ಈ ಪ್ರಕ್ರಿಯೆ ಅಡಿಯಲ್ಲಿ Kennametal ರವರ ಮೂರನೇ ವ್ಯಕ್ತಿಗಳ ಅನುಸರಣೆ ಅಗತ್ಯತೆಗಳನ್ನು ಸೂಕ್ತವಾದ ಮತ್ತು ಸಮಂಜಸವಾದ ಪ್ರಯತ್ನಗಳನ್ನು ತಿಳಿಯಪಡಿಸಬೇಕು, ಅಲ್ಲದೇ ದಾಖಲೆಗಳ ಧಾರಣೆಯ ಅಗತ್ಯತೆಗಳನ್ನು ಕೂಡ ತಿಳಿಯಪಡಿಸಬೇಕು. ಮೂರನೇ ವ್ಯಕ್ತಿಯನ್ನು ಆಯ್ಕೆಮಾಡುವುದಕ್ಕಾಗಿ ಮತ್ತು ವ್ಯಾಪಾರ ಸಂಬಂಧವನ್ನು ನಿರ್ವಹಿಸುವುದಕ್ಕಾಗಿ ಜವಾಬ್ದಾರಿ ಹೊಂದಿರುವ ಕಂಪನಿಯ ಅಧಿಕಾರಿಯು ಈ ವಿಧಿಯೊಂದಿಗೆ ಅನುಸರಣೆಯನ್ನು ಖಚಿತಪಡಿಸುವುದನ್ನು ನಿರ್ಬಂಧಿಸುವ ಅಧಿಕಾರ ಹೊಂದಿರುತ್ತಾರೆ.

**VI. ವರದಿ ಮಾಡಬೇಕಾದ ನಿರ್ಬಂಧಗಳು**

A. ನೌಕರರು: ಅನ್ವಯವಾಗುವ ಕಾನೂನು ಅಥವಾ ನಿಯಮಗಳ ಯಾವುದೇ ಸಂಭವನೀಯ ಅಥವಾ ನೈಜವಾದ ಉಲ್ಲಂಘನೆಗಳನ್ನು (ವೈಯಕ್ತಿಕ ಜ್ಞಾನದ ಮೇರೆಗೆ ಅಥವಾ ಇಲ್ಲದೆ) ಉದ್ಯೋಗಿಗಳು ತಕ್ಷಣವೇ Kennametal ಕಚೇರಿಯ ಸಾಮಾನ್ಯ ಸಲಹೆಗೆ ವರದಿ ನೀಡಬೇಕು. ಉದ್ಯೋಗಿಯು ಒಮ್ಮೆ ಒಂದು ವರದಿ ಮಾಡಿದರೇ, ಯಾವುದೇ ಹೊಸ ಮಾಹಿತಿ ಆತನ ಅಥವಾ ಆಕೆಯ ವಶಕ್ಕೆ ಬಂದರೆ

ಉದ್ಯೋಗಿಯೂ ಸಹ ಅದನ್ನು ನವೀಕರಿಸುವ ಹೊಣೆ ಹೊಂದಿರುತ್ತಾರೆ. ಆ ಉದ್ಯೋಗಿಯು ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದಲ್ಲಿ ಅಂತಹ ವರದಿಯು ಉದ್ಯೋಗಿಯ ವಿರುದ್ಧವಾಗಿ ಪ್ರತೀಕಾರದ ಕ್ರಮವಾಗಿ ಯಾವುದೇ ಪರಿಸ್ಥಿತಿಯಲ್ಲಿಯೂ ಮಾಡಲಾಗುವುದಿಲ್ಲ.

B. ಮೂರನೇ ವ್ಯಕ್ತಿಗಳು: ಎಲ್ಲಾ ಮೂರನೇ ವ್ಯಕ್ತಿಗಳು ಯಾವುದೇ ಸಂದೇಹಾಸ್ಪದ ಅಥವಾ ನೈಜ ಉಲ್ಲಂಘನೆಗಳನ್ನು (ವೈಯಕ್ತಿಕ ಜ್ಞಾನದ ಮೇರೆಗೆ ಅಥವಾ ಇಲ್ಲದೆ) ಅವರ Kennametal ವ್ಯಾಪಾರ ಸಂಪರ್ಕದವರಿಗೆ ಅಥವಾ Kennametal ಕಚೇರಿಯ ಸಾಮಾನ್ಯ ಸಲಹೆಗೆ ವರದಿ ಮಾಡಬೇಕು.

C. Kennametal ಕಚೇರಿಯ ಸಾಮಾನ್ಯ ಸಲಹೆ: ವರದಿ ಮಾಡುವ ಉದ್ದೇಶಗಳಿಗಾಗಿ, Kennametal ನ ಕಚೇರಿಯ ಸಾಮಾನ್ಯ ಸಲಹೆಯನ್ನು ಇಲ್ಲಿ ಸಂಪರ್ಕಿಸಬಹುದು:

ಸಾಮಾನ್ಯ ಸಲಹೆಯ ಕಚೇರಿ
1600 Technology Way
Latrobe, PA U.S.A. 15650-0231
ಫೋನ್: (724) 539-4031; ಫ್ಯಾಕ್ಸ್: (724) 539-3839
ಇಮೇಲ್: K-corp.ethics@kennametal.com

ಪರ್ಯಾಯವಾಗಿ, ನೀವು ಮುಕ್ತ ಕರೆಯ ಸಹಾಯವಾಣಿಗೆ ಕರೆ ಮಾಡಬಹುದು (1-877-781-7319), ಇದನ್ನು Kennametal ನೀತಿ ಸಂಹಿತೆ & ಅನುಸರಣೆ ಕಚೇರಿಯಿಂದ ನಿರ್ವಹಿಸಲಾಗುತ್ತಿದೆ ಮತ್ತು ಇದನ್ನು ಅನಾಮಧೇಯ ಮತ್ತು ಗೌಪ್ಯತೆ ಆಧಾರದಲ್ಲಿ ಬಳಸಬಹುದಾಗಿದೆ.

## VII. ದಂಡಗಳು

ಜಾಗತಿಕ ಭ್ರಷ್ಟಾಚಾರ ನಿಗ್ರಹ ಕಾನೂನು ಉಲ್ಲಂಘನೆಗಳಿಂದಾಗಿ ಕಂಪನಿ ಮತ್ತು ವ್ಯಕ್ತಿಗಳಿಗೆ ಗಮನಾರ್ಹವಾಗಿ ದಂಡಗಳನ್ನು ವಿಧಿಸುವಲ್ಲಿ ಕಾರಣವಾಗುತ್ತದೆ. ಈ ಕೆಳಗಿನವುಗಳು FCPA ಮತ್ತು UK ಯ ಲಂಚಗಾರಿಕೆ ಕಾಯಿದೆಯ ಅಡಿಯಲ್ಲಿ ಬರುವ ಸಂಭವನೀಯ ದಂಡಗಳ ಉದಾಹರಣೆಗಳು:

# ಪ್ರಮಾಣಿತ ಕಾರ್ಯವಿಧಾನ

**ಕಾರ್ಯವಿಧಾನದ ಸಂ.:** KMT-US-OGC-0004

**ಪರಿಷ್ಕರಣೆ:** 02 **ಪುಟ:** 10 10 ರ

**ವಿಷಯ/ಶೀರ್ಷಿಕೆ:** **KENNAMETAL INC. ಜಾಗತಿಕ ಭ್ರಷ್ಟಾಚಾರ ವಿರೋಧಿ ಮತ್ತು ಲಂಚ ವಿರೋಧಿ ಕಾರ್ಯವಿಧಾನ**

**FCPA**

ಕಂಪನಿಗಳು

- ಪ್ರತಿ ಉಲ್ಲಂಘನೆಗೆ US$2 ಮಿಲಿಯನ್‌ವರೆಗೆ ದಂಡ ವಿಧಿಸಲಾಗುತ್ತದೆ
- ಸರ್ಕಾರಿ ಒಪ್ಪಂದಗಳಲ್ಲಿ ಪಾಲ್ಗೊಳ್ಳದಿರಲು ನಿರ್ಬಂಧ
- ರಫ್ತು ಸವಲತ್ತುಗಳ ನಷ್ಟ
- ಸ್ವತಂತ್ರ್ಯ ಅನುಸರಣೆ ವೀಕ್ಷಕರ ನೇಮಕಾತಿ
- ಲೆಕ್ಕಾಚಾರ ಪೂರೈಕೆಗಳು – ಪ್ರತಿ ಉಲ್ಲಂಘನೆಗೆ $2.5 ಮಿಲಿಯನ್‌ವರೆಗೆ ದಂಡ ವಿಧಿಸಲಾಗುತ್ತದೆ

ವ್ಯಕ್ತಿಗಳು

- ಪ್ರತಿ ಉಲ್ಲಂಘನೆಗೆ US$100,000 ಮಿಲಿಯನ್‌ವರೆಗೆ ದಂಡ ವಿಧಿಸಲಾಗುತ್ತದೆ
- ಪ್ರತಿ ಉಲ್ಲಂಘನೆಗೆ 5 ವರ್ಷಗಳವರೆಗೆ ಜೈಲುವಾಸ
- ಲೆಕ್ಕಾಚಾರ ಪೂರೈಕೆಗಳು – US$10 ಮಿಲಿಯನ್ ವರೆಗೆ ದಂಡ ವಿಧಿಸಲಾಗುತ್ತದೆ ಮತ್ತು 10 ವರ್ಷಗಳ ಜೈಲುವಾಸ

**UK ಲಂಚಗಾರಿಕೆ ಕಾಯಿದೆ**

ಕಂಪನಿಗಳು

- ಅನಿಯಮಿತ ಹಣಕಾಸು ದಂಡಗಳು
- ಸಾರ್ವಜನಿಕ ಒಪ್ಪಂದಗಳಿಂದ ನಿರ್ಬಂಧ
- ಆಸ್ತಿ ವಶಪಡಿಸಿಕೊಳ್ಳಲು ವಾದವಿವಾದಗಳು

ವ್ಯಕ್ತಿಗಳು

- ಅನಿಯಮಿತ ಹಣಕಾಸು ದಂಡಗಳು
- 10 ವರ್ಷಗಳವರೆಗೆ ಜೈಲುವಾಸ

## VIII. KENNAMETAL ಉಲ್ಲೇಖಗಳು

- ವ್ಯಾಪಾರದ ನೈತಿಕತೆ ಮತ್ತು ನೀತಿ ಸಂಹಿತೆ
- ಜಾಗತಿಕ ದಾಖಲೆಗಳ ನಿರ್ವಹಣೆ ಕಾರ್ಯವಿಧಾನ
- ಪ್ರತಿಕಾರವಲ್ಲದ ಮತ್ತು ವರದಿಯ ಮಾಡುವ ಕಟ್ಟುಪಾಡು ಕಾರ್ಯವಿಧಾನ
- ಬಡ್ಡಿ ಮಾರ್ಗದರ್ಶಿಯ ಸಂಘರ್ಷ
- ಉಡುಗೊರೆ ಮತ್ತು ವ್ಯಾಪಾರಿ ಕೃಪಾಂಶ ಮಾರ್ಗದರ್ಶಿ
- ವೆಚ್ಚ ಪ್ರಕ್ರಿಯೆಯ ದೃಢೀಕರಣ

ಈ ಕಾರ್ಯವಿಧಾನದ ವಿದ್ಯುನ್ಮಾನ ಆವೃತ್ತಿಯು ಒಂದು ನಿಯಂತ್ರಿತ ದಾಖಲೆಯಾಗಿದೆ.
ಈ ದಾಖಲೆಯಿಂದ ಮುದ್ರಿತವಾದ ಯಾವುದೇ ಪ್ರತಿಗಳು ಕೇವಲ ಉಲ್ಲೇಖಕ್ಕಾಗಿ ಮಾತ್ರ ಆಗಿರುತ್ತದೆ.

ನಮೂನೆ: KMT0002F01 R02 (12/2008)